**DW-1** OS 376/2012

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಅಸಲು ದಾವೆ. ಸಂಖ್ಯೆ:376/2012**

ಡಿ.ಡಬ್ಲ್ಯೂ:01 ಶ್ರೀ ರಾಮಶೇಖರ್ ರೆಡ್ಡಿ

**ಸಾಕ್ಷಿಯನ್ನು ದಿನಾಂಕಃ 07-03-2025 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀಸವಾಲು ಃ ವಾದಿಯ ಪರ ಶ್ರೀ. ಜೆ ಪಿ ವಕೀಲರಿಂದ**

1. ನಾನು ನನ್ನ ಹಿಂದಿನ ವಿಚಾರಣೆಯಲ್ಲಿ ಹೇಳಿದಂತೆ ನನ್ನ ಅಜ್ಜನಾದ ರಾಮರೆಡ್ಡಿರವರು 4 ಗ್ರಾಮವಾದ ಪಂತರಹಳ್ಳಿ ಮಜರಾ ಬಲಚಪಳ್ಳಿ, ಭೂಶೆಟ್ಟಹಳ್ಳಿ ಮತ್ತು ಸೊಣ್ಣಕುಪ್ಪದಲ್ಲಿ ಅವರ ಮೊದಲನೇ ಹೆಂಡತಿ ಮತ್ತು ಮಕ್ಕಳಿಗೆ ಆಸ್ತಿಗಳನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅಲ್ಲ ಎರಡು ಊರಾದ ಬಲಚಪಲ್ಲಿ ಮತ್ತು ಸೊಣ್ಣಕುಪ್ಪದ ಆಸ್ತಿಗಳನ್ನು ಕೊಟ್ಟಿರುತ್ತಾರೆ ಎನ್ನುತ್ತಾರೆ. ಸದರಿ ಎರಡು ಊರುಗಳಲ್ಲಿ ನನ್ನ ಅಜ್ಜನವರು ಅವರ ಮೊದಲ ಹೆಂಡತಿ ಮತ್ತು ಮಕ್ಕಳಿಗೆ ಆಸ್ತಿಗಳನ್ನು ಕೊಟ್ಟಿರುತ್ತಾರೆ ಎಂಬ ಬಗ್ಗೆ ನಾನು ಇಲ್ಲಿಯವರೆಗೆ ಕೇಳಿ ತಿಳಿದುಕೊಂಡಿದ್ದೇನಾ ಎಂದರೆ ಇಲ್ಲ. ದಿಃ17.01.1936 ರ ಪಾಲು ವಿಭಾಗ ಪತ್ರದಲ್ಲಿ ಸದರಿ ಮೇಲೆ ಹೇಳಿದ ಊರುಗಳ ಆಸ್ತಿಗಳನ್ನು ಬಿ ಷೆಡ್ಯೂಲ್ ನಂತೆ ಅವರಿಗೆ ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪತ್ರದಂತೆ ನನ್ನ ಅಜ್ಜನವರು ಉಳಿದ ಊರುಗಳಾದ ದಾರಂ ಕೃಷ್ಣೇಪಲ್ಲಿ, ಗೆನ್ನೇರಹಳ್ಳಿ, ಬೇತಮಂಗಲ, ನಾಯನಹಳ್ಳಿ ಮಜರಾ ಕೊತ್ತೂರು, ನೇರ್ನಹಳ್ಳಿ, ದಾಸೇನಹಳ್ಳಿ ಮತ್ತು ಚತ್ರಹಳ್ಳಿ ಗಳ ಆಸ್ತಿಗಳನ್ನು ತಮಗೆ ಇಟ್ಟುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಸದರಿ ನನ್ನ ತಾತನವರು ದಾರಂ ಕೃಷ್ಣೇಪಲ್ಲಿಯವರ ಅವರ ಪೂರ್ತಿ ಆಸ್ತಿಗಳ ಚೆಕ್ಕುಬಂದಿ ಆದ ಪೂರ್ವಕ್ಕೆ ವನಗಾನಹಳ್ಳಿ ಸರಹದ್ದು, ಪಶ್ಚಿಮಕ್ಕೆ ನಾಯನಹಳ್ಳಿ ಮಜರಾ ಕೊತ್ತೂರು ಮತ್ತು ಸಿದ್ದಾರೆಡ್ಡಿ ದಿನ್ನೆ ಸರಹದ್ದು, ಉತ್ತರಕ್ಕೆ ಭತ್ರಕುಪ್ಪ ಸರಹದ್ದು ದಕ್ಷಿಣಕ್ಕೆ ವೆಂಕಟಾಪುರ ಸರಹದ್ದು ಆಸ್ತಿಯನ್ನು ತಮ್ಮ ಬಳಿಯೇ ಇಟ್ಟುಕೊಂಡರು ಎಂದರೆ ನನಗೆ ಗೊತ್ತಿಲ್ಲ. ಹಾಗಾದರೆ ನನಗೆ ನನ್ನ ತಾತನವರ ದಾರಂ ಕೃಷ್ಣೆಪಲ್ಲಿಯಲ್ಲಿರುವ ಆಸ್ತಿಯ ಚೆಕ್ಕುಬಂದಿ ಗೊತ್ತಿದೆಯೇ ಎಂದರೆ ಇಲ್ಲ. ಸಾಕ್ಷಿಗೆ ಒಂದು ವಿಲೇಜ್ ಮ್ಯಾಪನ್ನು ತೋರಿಸಲಾಗಿ ಅದು ದಾರಂ ಕೃಷ್ಣೇಪಲ್ಲಿಯ ವಿಲೇಜ್ ಮ್ಯಾಪ್ ಎಂದರೆ ಒಪ್ಪುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿ.247 ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಪಡೆಯಲು 5 ನೇ ವಾದಿಯ ವರು ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿಯ ದೃಡೀಕೃತ ಪ್ರತಿಯನ್ನು ಸಾಕ್ಷಿಗೆ ತೋರಿಸಿದಾಗ ಅದನ್ನು ನೋಡಿ ಅವರು ಒಪ್ಪಿದ ಕಾರಣ ಅದನ್ನು ಈಗ 248 ಎಂದು ಗುರುತಿಸಲಾಯಿತು. ಸದರಿ ನಿಪಿ.247 ರಲ್ಲಿ ಜೋಡಿದಾರಂ ಕೃಷ್ಣೇಪಲ್ಲಿ ಎಂದು ನಮೂದು ಇಲ್ಲ ಎಂದರೆ ಹೌದು. ಸದರಿ ನಿಪಿ. 247 ದಾಖಲೆಯನ್ನು ಆ ಪೂರ್ತಿ ಊರನ್ನು ಸರ್ವೆ ಮಾಡಿ ನಂತರ ಕೊಡಲಾಗಿದೆ ಎಂದರೆ ಹೌದು. ಈ ದಾವೆಯ ದಾವಾ ಆಸ್ತಿಗಳು ಸಹ ಸದರಿ ನಿಪಿ.247 ರಲ್ಲಿ ಇದೆ ಎಂದರೆ ಹೌದು.

3. ಈ ದಾವೆಯಲ್ಲಿ ಕಮಲಮ್ಮ ರವರು ಅವರ ಜೀವಿತಾವದಿಯಲ್ಲಿ ಪ್ರತಿವಾದ ಪತ್ರವನ್ನು ಹಾಕಿರುತ್ತಾರಾ ಎಂದು ನಾನು ವಿಚಾರಿಸಿರುವುದಿಲ್ಲ. ಈ ದಾವೆಯು 2015 ನೇ ಸಾಲಿನಲ್ಲಿ ವಾದಿಗಳು ನ್ಯಾಯಾಲಯಕ್ಕೆ ಸಾಕ್ಷ್ಯ ವಿಚಾರಣೆ ಕೊಡಲು ಬಂದಿಲ್ಲ ಎಂದು ಒಮ್ಮೆ ವಜಾಗೊಂಡಿದೆ ಎಂದರೆ ಸರಿ. ಈ ದಾವೆಯ ಮೂಲ ಪ್ರತಿವಾದಿ ಆದ ಕಮಲಮ್ಮ ರವರು ದಿಃ14.10.2017 ರಂದು ಮರಣ ಹೊಂದಿರುತ್ತಾರೆ. ಈ ದಾವೆಗೆ ಸಂಬಂದ ಪಟ್ಟಂತೆ Misc. ಅರ್ಜಿಯು ಇತ್ಯರ್ಥಕ್ಕೆ ಬಾಕಿ ಇರುವಾಗ ಸದರಿ ಮೂಲ ಪ್ರತಿವಾದಿ ಆದ ಕಮಲಮ್ಮ ರವರು ಜೀವಂತವಾಗಿ ಇದ್ದರು. ನನ್ನನ್ನು ಸದರಿ misc. ಅರ್ಜಿಯಲ್ಲಿ ಪಕ್ಷಗಾರರಾಗಿ

ಮಾಡಲಾಗಿದೆಯಾ ಅಥವಾ ಈ ದಾವೆಯು ರಿಸ್ಟೋರ್ ಆದ ನಂತರ ಪಕ್ಷಗಾರರಾಗಿ ಮಾಡಲಾಗಿದೆಯಾ ಎಂದರೆ ಸಾಕ್ಷಿಯು **2019** ರಲ್ಲಿ ನನಗೆ ನೋಟೀಸ್ ಬಂದಿದೆ ಎನ್ನುತ್ತಾರೆ.

**4.** ನಾನು ಈ ದಾವೆಯಲ್ಲಿ ನನ್ನ ಪ್ರತಿವಾದ ಪತ್ರವನ್ನು ಹಾಕಿರುತ್ತೇನೆ ನಾನು ಮೊದಲನೇ ಬಾರಿಗೆ ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ದಿಃ**08.03.2021** ರಂದು ಹಾಕಿರುತ್ತೇನೆ ಎಂದರೆ ಸರಿ. ಅದರ ನಂತರ ವಾದಿಗಳು ವಾದ ಪತ್ರದ ತಿದ್ದುಪಡಿ ಮಾಡಿದ್ದು ನಂತರ ನಾನು ಹೆಚ್ಚುವರಿ ಪ್ರತಿವಾದ ಪತ್ರವನ್ನು ದಿಃ**29.10.2021** ರಂದು ಹಾಕಿರುತ್ತೇನೆ ಎಂದರೆ ಹೌದು. ನನ್ನ ತಾತನವರಾದ ರಾಮರೆಡ್ಡಿ ರವರು **1956** ರಲ್ಲಿ ಮರಣ ಹೊಂದಿದ್ದು ದಿನಾಂಕ ಹೇಳಲಾಗುವುದಿಲ್ಲ. ನನ್ನ ತಂದೆ ಆದ ಶ್ರೀರಾಮರೆಡ್ಡಿರವರ ಮರಣದ ದಿನಾಂಕಃ**07.11.1997** ಆಗಿರುತ್ತದೆ. ಸದರಿ ವಾದಿಯವರು ಹಾಕಿದ **misc** ಸಂಖ್ಯೆ**8/2015** ಎಂದರೆ ನನಗೆ ಗೊತ್ತಿಲ್ಲ. ಸದರಿ **8/2015** ದಿನಾಂಕಃ**09.10.2019** ರಂದು ಈ ದಾವೆಯನ್ನು ರಿಸ್ಟೋರ್ ಮಾಡಬೇಕೆಂದು ಆದೇಶ ಆಗಿರುತ್ತದೆ ಎಂದರೆ ಹೌದು. ಸದರಿ **misc** ಸಂಖ್ಯೆ**8/2015** ರಲ್ಲಿ ಈ ದಾವೆಯ ಮೂಲ ಪ್ರತಿವಾದಿ ಆಕ ಕಮಲಮ್ಮ ರವರ ಮರಣಾ ನಂತರ ನನ್ನನ್ನು ಸದರಿ ಅರ್ಜಿಯಲ್ಲಿ ಅವರ ಉತ್ತರಾದಿಕಾರಿ ಆಗಿ ಪಕ್ಷಗಾರರಾಗಿ ಮಾಡಲಾಗಿದೆ ಎಂದರೆ ಹೌದು.

**5.** ನನ್ನ ಹೆಸರು ರಾಮಶೇಖರರೆಡ್ಡಿ ಅಲಿಯಾಸ್ ಬಾಬುರೆಡ್ಡಿ ಎಂದರೆ ಹೌದು. ನನ್ನ ತಾತನವರಾದ ಎಂ. ರಾಮರೆಡ್ಡಿರವರು ಯಾವ ಭಾಷೆಯಲ್ಲಿ ಸಹಿ ಮಾಡುತ್ತಾರೆ ಎಂದರೆ ಸಾಕ್ಷಿಯು ನಾನು ಅವರ ಸಹಿಯನ್ನು ನೋಡಿಲ್ಲ ಎನ್ನುತ್ತಾರೆ. ನಾನು ಇಲ್ಲಿಯವರೆಗೆ ಸದರಿ ನನ್ನ ತಾತನವರು ಯಾವ ರೀತಿ ಯಾವ ಭಾಷೆಯಲ್ಲಿ ಸಹಿ ಮಾಡುತ್ತಾರೆ ಎಂದು ವಿಚಾರಣೆ ಮಾಡಿರುವುದಿಲ್ಲ. ನನ್ನ ತಂದೆಯವರಾದ ಜಿ ಆರ್ ಶ್ರೀರಾಮರೆಡ್ಡಿರವರು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಾರೆ. ನನ್ನ ಅತ್ತೆ ಆದ ಮೂಲ ಪ್ರತಿವಾದಿ ಆದ ಕಮಲಮ್ಮ ರವರು ಸಹ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಾರೆ. ನನಗೆ **1968** ನೇ ಸಾಲಿನಲ್ಲಿ ಸುಮಾರು **4** ವರ್ಷ ಪ್ರಾಯ ಇರುತ್ತದೆ. ನನ್ನ ತಾತನವರಾದ ಎಂ.ರಾಮರೆಡ್ಡಿರವರು ಅವರಿಗೆ ಸೇರಿದ ಆಸ್ತಿಗಳನ್ನು ಏನು ಮಾಡಿದ್ದಾರೆ ಏನೆಲ್ಲಾ ವ್ಯವಹಾರ ಮಾಡಿದ್ದಾರೆ ಎಂಬೆಲ್ಲಾ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಅದೇ ರೀತಿ ನನ್ನ ತಂದೆಯವರಾದ ಜಿ ಆರ್ ಶ್ರೀರಾಮರೆಡ್ಡಿರವರು ಅವರಿಗೆ ಸೇರಿದ ಆಸ್ತಿಗಳನ್ನು ಏನು ಮಾಡಿದ್ದಾರೆ ಏನೆಲ್ಲಾ ವ್ಯವಹಾರ ಮಾಡಿದ್ದಾರೆ ಎಂಬೆಲ್ಲಾ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ತಂದೆಯವರಾದ ಜಿ ಆರ್ ಶ್ರೀರಾಮರೆಡ್ಡಿರವರ ಸಹಿಯನ್ನು ಯಾವುದಾದರೂ ದಾಖಲೆಯಲ್ಲಿ ನೋಡಿದಾರೆ ನನಗೆ ಗೊತ್ತಾಗುತ್ತದೆ ಎಂದರೆ ಸರಿ.

**6.** ಸಾಕ್ಷಿಗೆ ನಿಪಿ.**15** ಕ್ರಯ ಪತ್ರದ ಮೊದಲನೇ ಪುಟವನ್ನು ತೋರಿಸಲಾಗಿ ಅದರಲ್ಲಿರುವ ಸಹಿಯು ನನ್ನ ತಂದೆಯವರಾದ ಜಿ ಆರ್ ರಾಮರೆಡ್ಡಿಯವರದ್ದಾ ಎಂದರೆ ಸಾಕ್ಷಿಯು ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಸದರಿ ನಿಪಿ.**15** ಕ್ರಯ ಪತ್ರದ **7** ನೇ ಪುಟವನ್ನು ತೋರಿಸಿ ಅದರಲ್ಲಿರುವ ಸಹಿ ನನ್ನ ತಂದೆಯವರದ್ದಾ ಎಂದರೆ ನೋಡಿ ಒಪ್ಪುತ್ತಾರೆ ಸದರಿ ಸಹಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ಈಗ ನಿಪಿ.**15** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ.**15** ಕ್ರಯ ಪತ್ರದ **8** ನೇ ಪುಟವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ತಂದೆಯವರ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಸಹಿಯನ್ನು ಈಗ ನಿಪಿ.**15** ಬಿ ಎಂದು ಗುರುತಿಸಲಾಯಿತು. ಸದರಿ ನನ್ನ ತಂದೆಯವರಾ ಸಹಿಯನ್ನು ಗುರುತಿಸಿದ ನಿಪಿ.**15** ದಿಃ**07.05.1968** ರ ನೊಂದಾಯಿತ ಕ್ರಯ ಪತ್ರ ಎಂದರೆ ನನಗೆ ಗೊತ್ತಿಲ್ಲ ಸದರಿ ನಿಪಿ.**15** ರ ದೃಡೀಕೃತ ಪ್ರತಿಯನ್ನು ನಾನು ಈ ದಾವೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಹೌದು. ಸದರಿ ನಿಪಿ.**15** ರ ಅಂಶಗಳನ್ನು ನಾನು ನಂತರ ತಿಳಿದುಕೊಂಡಿದ್ದೇನಾ ಎಂದರೆ ಇಲ್ಲ. ಸದರಿ ನಿಪಿ.**15** ರ ಅಂಶಗಳನ್ನು ನನ್ನ ವಕೀಲರ ಮೂಲಕ ನಾನು ಕೇಳಿ

ತಿಳಿದುಕೊಂಡಿದ್ದೇನಾ ಎಂದರೆ ಇಲ್ಲ. ನಿಪಿ.15 ರ ದಾಖಲೆಯ ಪ್ರಕಾರ ನನ್ನ ತಂದೆಯವರಾದ ಜಿ ಆರ್ ಶ್ರೀರಾಮರೆಡ್ಡಿರವರು ಚಕ್ಕೇಗೌಡರ ಮಗ ಕೆ ಸಿ ರಾಮಗೌಡರಿಗೆ ಮಾಡಿಕೊಟ್ಟ ಕ್ರಯ ಪತ್ರ ಮತ್ತು ಆ ವಿಚಾರ ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ನಿಪಿ.15 ರಲ್ಲಿ 1 ರಿಂದ 9 ದಾವಾ ಆಸ್ತಿಗಳನ್ನು ಮತ್ತು ದಾರಂ ಕೃಷ್ಣಪಲ್ಲಿಯಲಿಲರುವ ಸರ್ವೆ ನಂ.28, 29, 30, 31, 32 ಆಸ್ತಿಗಳನ್ನು ನನ್ನ ತಂದೆಯವರು ಸದರಿ ಕೆ ಸಿ ರಾಮೇಗೌಡರಿಗೆ ಮಾರಿರುವ ವಿಚಾರ ನಮೂದಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ತಂದೆಯವರಿಗೆ ಅದರಲ್ಲಿ ಹಕ್ಕು ಇದ್ದರೆ ತಾನೆ ಮಾರಾಟ ಮಾಡವುದು  ಎನ್ನುತ್ತಾರೆ . ಸದರಿ ನನ್ನ ತಂದೆಯವರಾದ ಜಿ.ಆರ್ ಶ್ರೀರಾಮಡ್ಡಿರವರು ನಿಪಿ.15 ಕ್ಕೆ ಸಂಬಂದ ಪಟ್ಟಂತೆ ಅವರ ಜೀವಿತಾವದಿಯಲ್ಲಿ ಮತ್ತು ಅವರ ವಾರಸುದಾರರು ಇಲ್ಲಿಯವರೆಗೆ ಸದರಿ ದಾಖಲೆಯನ್ನು ಪ್ರಶ್ನಿಸಿ ಯಾವುದೇ ದಾವೆಯನ್ನು ಹೂಡಿಲ್ಲ ಎಂದರೆ ಹೌದು.

**ಮುಂದುವರೆದ ಪಾಟೀಸವಾಲಿಗೆ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**